ದಿನಾಂಕಃ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಆರೋಪಿ ಪರ ಶ್ರೀ ಬಿ ಪಿ ಆರ್ ವಕೀಲರಿಂದಃ**

ನಾನು ಬಿ ಎ ಪದವೀಧರ. ನಾನು ಗ್ಯಾಸ್ ಏಜೆನ್ಸಿಯನ್ನು ನಡೆಸುತ್ತಿದ್ದೇನೆ ಹಾಗೂ ವ್ಯವಸಾಯ ಮಾಡುತ್ತಿದ್ದೇನೆ. 2020 ನೇ ಇಸವಿಯಲ್ಲಿ ನಾನು ಬಿಳಿಕೆರೆಯಲ್ಲಿ ಗ್ಯಾಸ್ ಏಜೆನ್ಸಿ ನಡೆಸುತ್ತಿದ್ದೆ. ಸದರಿ ಗ್ಯಾಸ್ ಏಜೆನ್ಸಿ ನನ್ನ ಹಾಗೂ ನನ್ನ ಹೆಂಡತಿಯ ಹೆಸರಿನಲ್ಲಿದೆ. ಗ್ಯಾಸ್ ಏಜೆನ್ಸಿಗೆ ಸಂಬಂಧಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಿಮ್ಮ ಪ್ರಮಾಣಪತ್ರದಲ್ಲಿ ಕೇವಲ ವ್ಯವಸಾಯ ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿ ಗ್ಯಾಸ್ ಏಜೆನ್ಸಿ ನಡೆಸುತ್ತಿದ್ದೇನೆ, ವ್ಯವಸಾಯ ಮತ್ತು ಲೇ ಔಟ್ ಮಾಡಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ಈ ಸಂಬಂಧ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ, ಹಾಜರುಪಡಿಸುತ್ತೇನೆ. ನಾನು ಶೀರ್ಷಿಕೆ ಪುಟದಲ್ಲಿ ನಮೂದಾಗಿರುವ ವಿಳಾಸದಲ್ಲಿ 10-12 ವರ್ಷಗಳಿಂದ ವಾಸವಾಗಿದ್ದೇನೆ. ನಾನು 25 ವರ್ಷಗಳಿಂದ ಬಿಳಿಕೆರೆಯ ಎಸ್ ಬಿ ಐ ಬ್ಯಾಂಕ್ ಹಾಗೂ 15 ವರ್ಷಗಳಿಂದ ಮೈಸೂರಿನ ಅಗ್ರಹಾರ ಶಾಖೆಯ ಯುಕೋ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನಾನು ಈ ಎರಡೂ ಬ್ಯಾಂಕ್ ನಲ್ಲಿ ವ್ಯವಹಾರ ಮಾಡುತ್ತಿದ್ದೇನೆ. ನನ್ನ ಖಾತೆಗಳಲ್ಲಿ ಹಣವಿರುತ್ತಿತ್ತು, ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಮ್ಮ ಖಾತೆಗಳಲ್ಲಿ ಹಣವಿಲ್ಲದ ಕಾರಣ ನೀವು ಅಕೌಂಟ್ ಎಕ್ಸ್ ಟ್ರಾಕ್ಟ್ ಅನ್ನು ಹಾಜರುಪಡಿಸುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾರ್ಷಿಕ ಆದಾಯ 5-10 ಲಕ್ಷವಿರುತ್ತದೆ. ಅದರಲ್ಲಿ ಸುಮಾರು ಶೇ. 50 ರಷ್ಟು ಖರ್ಚು ಇದೆ. ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ತಿಳುವಳಿಕೆ ಇದೆ ಎಂದರೆ ಸರಿ. ನಾನು 2013 ರಿಂದ ಗ್ಯಾಸ್ ಏಜೆನ್ಸಿ ನಡೆಸುತ್ತಿದ್ದೇನೆ.

ನಾನು ವಿದ್ಯಾಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಸದರಿ ವಿದ್ಯಾಸಂಸ್ಥೆ 1990-91 ರಿಂದ 2013-14 ರವರೆಗೆ ನಡೆಯಿತು. ವಿದ್ಯಾಸಂಸ್ಥೆಗೆ ನನ್ನ ತಂದೆ ಅಧ್ಯಕ್ಷರಾಗಿದ್ದರು. ವಿದ್ಯಾಸಂಸ್ಥೆ ಹುಣಸೂರು ಹಾಗೂ ಗೌಡಗೆರೆಯಲ್ಲಿ ನಡೆಯುತ್ತಿತ್ತು. ಸದರಿ ವಿದ್ಯಾಸಂಸ್ಥೆಯಲ್ಲಿ ನರ್ಸರಿ, ಪ್ರೈಮರಿ, ಮಿಡಲ್ ಸ್ಕೂಲ್ ಮತ್ತು ಹೈಸ್ಕೂಲ್ ಇದ್ದವು. ಸದರಿ ಶಾಲೆ 2011 ರಲ್ಲಿ ಸರ್ಕಾರಿ ಅನುದಾನಿತ ಶಾಲೆಯಾಗಿ ಮಾರ್ಪಾಡಾಗಿರುತ್ತದೆ. ನನಗೆ ಸುಮಾರು 18 ವರ್ಷಗಳಿಂದ ಆರೋಪಿಯ ಪರಿಚಯ. ನಾನು ಹಾಗೂ ಆರೋಪಿ ಆದರ್ಶ ವಿದ್ಯಾಸಂಸ್ಥೆಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದೆವು.

ಆಗಿನಿಂದಲೂ ಪರಿಚಯ. ಆರೋಪಿ ಯಾವ ವರ್ಷದಲ್ಲಿ ಆದರ್ಶ ವಿದ್ಯಾಸಂಸ್ಥೆಗೆ ಸೇರಿಕೊಂಡರು ಎಂದು ನನಗೆ ನಿಖರವಾಗಿ ನೆನಪಿಲ್ಲ. ಆರೋಪಿ ಆದರ್ಶ ವಿದ್ಯಾಸಂಸ್ಥೆಗೆ ಸೇರಿದಾಗ ನಾನು ಅಲ್ಲಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದೆ ಎಂದರೆ ಸರಿ. ಆರೋಪಿ ಕೆಲಸಕ್ಕೆ ಸೇರಿದಾಗ ವಿದ್ಯಾಸಂಸ್ಥೆ ಇನ್ನೂ ಸರ್ಕಾರಿ ಅನುದಾನಿತ ಶಾಲೆಯಾಗಿರಲಿಲ್ಲ. ಆರೋಪಿ ಸೇರಿ ಎಷ್ಟು ವರ್ಷದ ನಂತರ ವಿದ್ಯಾಸಂಸ್ಥೆ ಸರ್ಕಾರಿ ಅನುದಾನಿತ ಶಾಲೆಯಾಯಿತು ಎಂದು ನೆನಪಿಲ್ಲ. ಸದರಿ ಶಾಲೆ ಸ್ವಂತ ಕಟ್ಟಡವಿಲ್ಲದ ಕಾರಣ ಸಾಕಷ್ಟು ಹಣವಿಲ್ಲದ ಕಾರಣ ಶಾಲೆ ಮುಚ್ಚಿಹೋಯಿತು. ನೀವು ಶಾಲೆಯನ್ನು ಮುಚ್ಚುವ ಮುನ್ನವೇ ಸರ್ಕಾರಿ ಅನುದಾನಿತ ಶಾಲೆಯಾಗಿತ್ತು ಎಂದರೆ ಸರಿ, ಸಾಕ್ಷಿ ಮುಂದುವರಿದು ಮಕ್ಕಳ ಕೊರತೆ ಇದ್ದ ಕಾರಣ ಶಾಲೆಯನ್ನು ಮುಚ್ಚಬೇಕಾಯಿತು. ನೀವು ಶಾಲೆಯನ್ನು ಮುಚ್ಚಿದ ಕಾರಣ ಶಿಕ್ಷಕರು, ಮಕ್ಕಳು ಮ್ಯಾನೇಜ್ ಮೆಂಟ್ ವಿರುದ್ಧ ಧರಣಿ ನಡೆಸಿದ್ದರು ಎಂದರೆ ಸರಿ. ನಿಮ್ಮ ವಿರುದ್ಧ ದೂರನ್ನು ನೀಡಿದ್ದರು ಹಾಗೂ ಸದರಿ ದೂರಿಗೆ ಸಂಬಂಧಪಟ್ಟ ಪ್ರ ವ ವರದಿ ಹಾಗೂ ಹಿಂಬರಹವನ್ನು **ನಿಡಿ1 ಮತ್ತು 2** ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ನಿಮ್ಮ ತಂದೆ ಹಾಗೂ ನೀವು ಆರೋಪಿತರಾಗಿ ಕಂಡುಬರುತ್ತಿದೆ ಎಂದರೆ ಸಾಕ್ಷಿ ಬಹಳ ವರ್ಷವಾಗಿರುತ್ತದೆ ನನಗೆ ಸರಿಯಾಗಿ ನೆನಪಿಲ್ಲ, ನನ್ನ ವಿರುದ್ಧ ಸುಳ್ಳು ದೂರನ್ನು ಹೂಡಿದ್ದಾರೆ ಎಂದು ಉತ್ತರಿಸುತ್ತಾರೆ. ದೂರನ್ನು ಸಲ್ಲಿಸಲು ಆರೋಪಿ ಸಹ ಶಿಕ್ಷಕರಲ್ಲಿ ಒಬ್ಬರಾಗಿದ್ದರು ಎಂದರೆ ಇರಬಹುದು ಎಂದು ಉತ್ತರಿಸುತ್ತಾರೆ. ನಿಮ್ಮ ಮೇಲೆ ದೂರು ನೀಡಿದ್ದ ಕಾರಣ ಆರೋಪಿ ಮೇಲೆ ನಿಮಗೆ ವೈಯಕ್ತಿಕ ದ್ವೇಷ ಇತ್ತು ಎಂದರೆ ಸರಿಯಲ್ಲ. ನನ್ನ ಪ್ರಕಾರ ಆರೋಪಿ ಜನವರಿ 2021 ರಲ್ಲಿ ಭೇಟಿಯಾಗಿರುತ್ತೇವೆ. ಆ ಸಮಯದಲ್ಲಿ ಆರೋಪಿ ಮೈಸೂರಿನಲ್ಲಿ ವಾಸವಾಗಿದ್ದರು, ವಿಳಾಸ ತಿಳಿದಿಲ್ಲ, ಅವರು ಯಾವ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ನೆನಪಿಲ್ಲ. ನಾನು ಆರೋಪಿಯನ್ನು ಆಗಾಗ ಬೇಟಿಯಾಗುತ್ತಿದ್ದೆ. ನಾನು ಆರೋಪಿಯ ಮನೆಗೆ ಹೋಗಿರಲಿಲ್ಲ. ಆರೋಪಿ ಮನೆ ಎಲ್ಲಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಯ ಮಕ್ಕಳ ವಿಚಾರ ನನಗೆ ಗೊತ್ತಿಲ್ಲ. ಶಾಲೆ ಮುಚ್ಚಿದ ನಂತರ ಆರೋಪಿ ಹಾಗೂ ನಿಮ್ಮ ನಡುವೆ ಭೇಟಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ25.05.2008 ರಂದು ಕನ್ನಡ ಭಾಷಾ ಶಿಕ್ಷಕಿಯಾಗಿ ಅನುದಾನ ರಹಿತ ಆದರ್ಶ ವಿದ್ಯಾಸಂಸ್ಥೆಗೆ ಸೇರಿರುತ್ತಾರೆ ಎಂದರೆ ಸರಿ. 2012 ರವರೆಗೆ ಆರೋಪಿ ಸಂಬಳ ರಹಿತ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2012 ನೇ ಇಸವಿಯಲ್ಲಿ ಎಲ್ಲಾ ಶಿಕ್ಷಕರಿಗೆ ತಲಾ 5 ಲಕ್ಷ ಹಣ ನೀಡಲು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಸರ್ಕಾರದಿಂದ ಸಂಬಳವನ್ನು ಶಿಕ್ಷಕರಿಗೆ ನೀಡಲು,

ಶಿಕ್ಷಕರಿಂದ ಚೆಕ್ಕನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಹೊರತುಪಡಿಸಿ ಜಗದೀಶ್ ಎನ್ನುವವರ ಮೇಲೆ 138 ಎನ್ ಐ ಆ್ಯಕ್ಟ್ ಅಡಿಯಲ್ಲಿ ಪ್ರಕರಣ ಹೂಡಿರುತ್ತೇನೆ. ಜಗದೀಶ್ ಎನ್ನುವವರೂ ಸಹ ಆದರ್ಶ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಜಗದೀಶ್ ರವರ ವಿರುದ್ಧ ಮೈಸೂರಿನ 5 ನೇ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ಹೂಡಿರುತ್ತೀರಿ, ಸಾಕ್ಷಿ ಸದರಿ ದಾಖಲಾತಿ ನೋಡಿ ಒಪ್ಪಿದ್ದು ಅದನ್ನು ನಿಡಿ3 ಎಂದು ಗುರುತಿಸಲಾಯಿತು. ಜಗದೀಶ್ ಹಾಗೂ ಆರೋಪಿಯನ್ನು ಹೊರತುಪಡಿಸಿ ಇನ್ಯಾರ ವಿರುದ್ಧವೂ ಪ್ರಕರಣವನ್ನು ಹೂಡಿರುವುದಿಲ್ಲ. ನಾನು ಆರೋಪಿಗೆ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಸೆಪ್ಟೆಂಬರ್ 2020 ರಲ್ಲಿ ನನ್ನ ಮನೆಯಲ್ಲಿ ಹಣವನ್ನು ನೀಡಿರುತ್ತೇನೆ. ದಿನಾಂಕ ಮತ್ತು ವಾರ ನನಗೆ ನೆನಪಿಲ್ಲ. ನೀವು ಯಾವುದೇ ಹಣ ನೀಡಿಲ್ಲದ ಕಾರಣ ನಿಮಗೆ ನಿಖರವಾಗಿ ದಿನಾಂಕ ಮತ್ತು ವಾರ ನೆನಪಿಲ್ಲ ಎಂದರೆ ಸರಿಯಲ್ಲ. ಹಣವನ್ನು ನೀಡಿದಾಗ ನನ್ನೊಂದಿಗೆ ನನ್ನ ಹೆಂಡತಿ ಇದ್ದರು. ಆ ದಿನದಂದು ನಿಮ್ಮ ಬಳಿ ಹಣವಿದ್ದ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ತುರ್ತು ಖರ್ಚಿಗಾಗಿ ಮನೆಯಲ್ಲಿ 2 ಲಕ್ಷದವರೆಗೆ ಹಣವನ್ನು ಇಟ್ಟಿರುತ್ತೇನೆ, ಆ ಹಣ ನೀಡಿರುತ್ತೇನೆ. ಆರೋಪಿಗೆ ನನ್ನ ಮನೆಯ ವಿಳಾಸ ತಿಳಿದಿರುತ್ತದೆ ಹಾಗೂ ಆಗಾಗ ಬರುತ್ತಿದ್ದರು. ದೂರವಾಣಿ ಮುಖಾಂತರ ನಮ್ಮಗಳ ಮಧ್ಯೆ ಮಾತುಕತೆಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿ ನಿಮ್ಮ ಮನೆಗೆ ಎಂದಿಗೂ ಬಂದಿರುವುದಿಲ್ಲ ಹಾಗೂ ಅವರು ನಿಮ್ಮ ಜೊತೆ ಸಂಪರ್ಕದಲ್ಲಿ ಇರಲಿಲ್ಲ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಆರೋಪಿ ಸಾಲ ತೀರಿಸಲು ಹಾಗೂ ಗೃಹಖರ್ಚನ್ನು ನಿರ್ವಹಿಸಲು ಹಣವನ್ನು ಪಡೆದಿರುತ್ತಾರೆ. ಆ ರೀತಿ ಯಾವುದೇ ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಖಾತೆಯ ಮುಖಾಂತರ ಹಣವನ್ನು ವರ್ಗಾವಣೆ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆರೋಪಿ ನಗದಿನ ಮುಖಾಂತರವೇ ಹಣವನ್ನು ನೀಡಲು ಹೇಳಿದ್ದರು, ಆದ ಕಾರಣ ನಗದನ್ನು ನೀಡಿದ್ದೇನೆ ಎಂದು ಉತ್ತರಿಸುತ್ತಾರೆ. ಆರೋಪಿ ನನಗೆ ಸಂಬಂಧಿಕರಲ್ಲ. ಸಾಮಾನ್ಯವಾಗಿ ಯಾರೂ ಸಹ ಬಡ್ಡಿಇಲ್ಲದೇ ದೊಡ್ಡಮೊತ್ತದ ಹಣವನ್ನು ನೀಡುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹಾಗೂ ಆರೋಪಿಯ ನಡುವೆ ಬಡ್ಡಿ ವಿಚಾರವಾಗಿ ಮಾತುಕತೆಯಾಗಿರುವುದಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ವಿಶ್ವಾಸವಿದ್ದ ಕಾರಣ ಯಾವುದೇ ಬಡ್ಡಿಯನ್ನು ನೀಡುವಂತೆ ಕೇಳಿರಲಿಲ್ಲ. ಆರೋಪಿ ಸಹ ನಿಮ್ಮ ವಿರುದ್ಧ ದೂರು

ದಾಖಲಿಸಲು ಒಂದು ಕಾರಣರಾಗಿದ್ದ ಕಾರಣ, ಆರೋಪಿಯೊಂದಿಗೆ ವಿಶ್ವಾಸವಿರಲಿಲ್ಲ ಅವರ ಮೇಲೆ ನಿಮಗೆ ದ್ವೇಷವಿತ್ತು ಎಂದರೆ ಸರಿಯಲ್ಲ. ನನಗೆ ಆನ್ ಡಿಮ್ಯಾಂಡ್ ಪ್ರೊನೋಟ್ ಬಗ್ಗೆ ಮಾಹಿತಿ ಇದೆ. ಆರೋಪಿಗೆ ಹಣ ನೀಡಿದ್ದೆ ಎಂದು ಹೇಳುವ ಸಮಯದಲ್ಲಿ ಅವರಿಂದ ಯಾವುದೇ ದಾಖಲಾತಿ ಮಾಡಿಕೊಂಡಿಲ್ಲ, ನನಗೆ ಅದರ ಅವಶ್ಯಕತೆ ಇರಲಿಲ್ಲ. ನಾನು ಆರೋಪಿಯಿಂದ ಭದ್ರತೆಗಾಗಿ ಯಾವುದೇ ದಾಖಲಾತಿ ಪಡೆದಿರುವುದಿಲ್ಲ. ಆರೋಪಿ ಯಾವ ದಿನಾಂಕದಂದು ಚೆಕ್ಕನ್ನು ನೀಡಿರುತ್ತಾರೆ ಎಂದು ನಿಖರವಾಗಿ ಹೇಳಲು ನೆನಪಿಲ್ಲ. ಆರೋಪಿಯಿಂದ ಅವರ ಅಗ್ರಹಾರದಲ್ಲಿರುವ ಶಾಲೆಯ ಬಳಿ ಮದ್ಯಾಹ್ನ 1 ಗಂಟೆಗೆ ಚೆಕ್ಕನ್ನು ನೀಡಿರುತ್ತಾರೆ. ಶಾಲೆಯ ಹೊರಗಡೆ ಬಂದು ಚೆಕ್ಕನ್ನು ನೀಡಿರುತ್ತಾರೆ. ಮುಂದಿನ ದಿನಾಂಕದಂದು ದಿನಾಂಕಗಳನ್ನು ತಿಳಿದುಕೊಂಡು ಹೇಳುತ್ತೇನೆ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.